1. ವೀರರಾಜೇಂದ್ರಪೇಟೆ ಪಟ್ಟಣಕ್ಕೆ ಸುಂಕದ ಬಾಬತು ಯಾವ ಪದಾರ್ಥಗಳನ್ನಾಗಲಿ ಪ್ಯಾಸ್ ಚೀಟಿ ಯಿಲ್ಲದೆ ಅಥವಾ ಅಂತಾ ಪದಾರ್ಥಗಳ ಮೇಲೆ ವಸೂಲಾಗತಕ್ಕ ಸುಂಕವನ್ನು ಪಾವತೀ ಮಾಡದೇ ಯಾವನು ಆಮದ ಮಾಡುತ್ತಾನೋ ಯಾ ಆಮದ ಮಾಡಲಿಕ್ಕೆ ಯತ್ನಿಸುತ್ತಾನೋ ಯಾ ತರುತ್ತಾನೋ ಅಂತಾ ಮನುಷ್ಯನು ಪೊಬ್ಬ ಮಾಜಿಸ್ಟ್ರೇಟರಮುಂದೆ ತಪ್ಪು ಸ್ಥಾಪಿಸಲ್ಪಟ್ಟಮೇಲೆ ಅಂತಾ ಪದಾರ್ಥಗಳ ಕಿಮ್ಮತ್ತಿನ್ನೆರಡಷ್ಟಕ್ಕೆ ಮೀರದ, ಮತ್ತಿನ್ಯಾವ ಸಂಗತಿಯಲ್ಲಿಯೂ 500 ರೂಪಾಯಿಗೆ ಮೀರದ ಪೊಂದು ಜುರ್ಮಾನೆಗೆ ಗುರಿಯಾಗತಕ್ಕದ್ದು. ಮತ್ತು ಸದರೀ ಪದಾರ್ಥಗಳು ಜಪ್ತಿ ಆಗಲಿಕ್ಕೆ ಸಹಾ ಗುರಿಯಾಗಿರತಕ್ಕದ್ದು.

2. ಸದರೀ ಮ್ಯುನಿಸಿ ಪಾಲಿಟಿಯೊಳಗೆ ಛೇದಿಸುವದಕ್ಕೊಸ್ಕರ ತರಲ್ಪಡುವ ಪ್ರತಿ ಕುರಿ ಯಾ ಮೇಕೆಗೆ 3 ಕಾಸುಗಳ ಪ್ರಕಾರ ಸುಂಕ ಕಟ್ಟಲ್ಪಡತಕ್ಕದ್ದು.

"ಬಮೋಜೀಬ್ ಹುಕ್ಕುಂ,"

T. CLARKE,
Offg. Secretary.

ಇಂಡ್ಯಗವರ್ಮೆಂಟಿನವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ರೆವಿನ್ಯೂ ಅಗ್ರಿಕಲ್ಚರ್ ವ ಕಾಮರ್ಸ್ ಇಲಾಖಾ.

ಇ ಸ್ತಿ ಹಾ ರ್.

ನಂ. 603. ತಾರೀಖು 14ನೇ ಜುಲೈ 1876ನೇ ಇಸವಿ ಮೊಕ್ಕಾಂ ಸಿಂಲಾ.

ಮೈಸೂರು ರೆವಿನ್ಯು ಸರ್ವೇ ಅಸಿಸ್ಟೆಂಟ್ ಸೂಪರ್‌ಟಿಂಡೆಂಟ್ ಮೇಸ್ಟರ್ ಪೆತಂಯವರು 1876ನೇ ಮೇ 27ರ ಲಗಾಯತ್ತು 4ನೇ ಗ್ರೇಡಿನಿಂದ 3ನೇ ಗ್ರೇಡಿಗೆ ಬಡತೀ ಮಾಡಲ್ಪಟ್ಟಿರುತ್ತಾರೆ.

A. O. HUME,
Secretary to the Govt. of India.